# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1681 (1993) |
| ಸದಸ್ಯರ ಹೆಸರು | : **ಡಾ|| ಕೆ. ಗೋವಿಂದರಾಜ್** (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು | : ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : 24.03.2026 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಎಷ್ಟು ಹಾಪ್ ಕಾಮ್ಸ್ (ತೋಟದ ಬೆಳಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘ) ಮಳಿಗೆಗಳಿವೆ; (ಜಿಲ್ಲಾವಾರು ವಿವರಗಳನ್ನು ನೀಡುವುದು) | ಪ್ರಸ್ತುತ ರಾಜ್ಯದಲ್ಲಿರುವ ಹಾಪ್ ಕಾಮ್ಸ್ ಮಳಿಗೆಗಳು 410. ಮಳಿಗೆಗಳ ಜಿಲ್ಲಾವಾರು ವಿವರ ಕೆಳಕಂಡಂತಿದೆ:- |

| ಕ್ರ.ಸಂ. | ಹಾಪ್ ಕಾಮ್ಸ್ | ಹಾಲಿ ಕಾರ್ಯ ನಿರ್ವಹಿಸುತ್ತಿರುವ ಮಳಿಗೆಗಳ ಸಂಖ್ಯೆ |
|---|---|---|
| 1 | ಬೆಂಗಳೂರು ಹಾಪ್ ಕಾಮ್ಸ್ | |
| | ಅ) ಬೆಂಗಳೂರು ನಗರ | 174 |
| | ಆ) ಬೆಂಗಳೂರು ಗ್ರಾಮಾಂತರ | 0 |
| | ಇ) ರಾಮನಗರ | 0 |
| | ಈ) ಕೋಲಾರ | 04 |
| | ಉ) ಚಿಕ್ಕ ಬಳ್ಳಾಪುರ | 0 |
| | **ಒಟ್ಟು** | **178** |
| 2 | ಬಾಗಲಕೋಟೆ | 1 |
| 3 | ಬೆಳಗಾವಿ | 8 |
| 4 | ಬೀದರ್ | 2 |
| 5 | ಬಳ್ಳಾರಿ | 1 |
| 6 | ಚಾಮರಾಜನಗರ | 9 |
| 7 | ಚಿತ್ರದುರ್ಗ | 17 |
| 8 | ಚಿಕ್ಕಮಗಳೂರು | 2 |
| 9 | ದಾವಣಗೆರೆ | 9 |
| 10 | ಧಾರವಾಡ | 6 |
| 11 | ಗದಗ | 7 |
| 12 | ಹಾವೇರಿ | 1 |
| 13 | ಹಾಸನ | 8 |
| 14 | ಕಲಬುರಗಿ | 12 |
| 15 | ಕೊಡಗು | 3 |
| 16 | ಕೊಪ್ಪಳ | 9 |
| 17 | ಮಂಡ್ಯ | 13 |
| 18 | ಮೈಸೂರು | 30 |
| 19 | ದಕ್ಷಿಣ ಕನ್ನಡ & ಉಡುಪಿ | 17 |
| 20 | ರಾಯಚೂರು | 5 |
| 21 | ಶಿವಮೊಗ್ಗ | 37 |

| | | |
|---|---|---|
| 22 | ಉತ್ತರ ಕನ್ನಡ | 12 |
| 23 | ತುಮಕೂರು | 15 |
| 24 | ವಿಜಯಪುರ | 8 |
| | **ಒಟ್ಟು** | **410** |

ಆ) ಎಷ್ಟು ಮಳಿಗೆಗಳು ಬಂದ್ ಆಗಿವೆ; ಕಾರಣಗಳೇನು; (ವಿವರಗಳನ್ನು ನೀಡುವುದು)

ಬಂದ್ ಆಗಿರುವ ಹಾಪ್ ಕಾಮ್ಸ್ ಮಳಿಗೆಗಳು 147. ಜಿಲ್ಲಾವಾರು ವಿವರ ಈ ಕೆಳಕಾಣಿಸಿದಂತಿದೆ:-

| **ಕ್ರ.ಸಂ.** | **ಹಾಪ್ ಕಾಮ್ಸ್** | **ಮುಚ್ಚಲ್ಪಟ್ಟ ಮಳಿಗೆಗಳ ಸಂಖ್ಯೆ** |
|---|---|---|
| 1 | ಬೆಂಗಳೂರು ಹಾಪ್ ಕಾಮ್ಸ್ | |
| | ಅ) ಬೆಂಗಳೂರು ನಗರ | 84 |
| | ಆ) ಬೆಂಗಳೂರು ಗ್ರಾಮಾಂತರ | 0 |
| | ಇ) ರಾಮನಗರ | 0 |
| | ಈ) ಕೋಲಾರ | 4 |
| | ಉ) ಚಿಕ್ಕ ಬಳ್ಳಾಪುರ | 0 |
| | **ಒಟ್ಟು** | **88** |
| 2 | ಬಾಗಲಕೋಟೆ | 0 |
| 3 | ಬೆಳಗಾವಿ | 3 |
| 4 | ಬೀದರ್ | 2 |
| 5 | ಬಳ್ಳಾರಿ | 2 |
| 6 | ಚಾಮರಾಜನಗರ | 1 |
| 7 | ಚಿತ್ರದುರ್ಗ | 2 |
| 8 | ಚಿಕ್ಕಮಗಳೂರು | 1 |
| 9 | ದಾವಣಗೆರೆ | 0 |
| 10 | ಧಾರವಾಡ | 3 |
| 11 | ಗದಗ | 0 |
| 12 | ಹಾವೇರಿ | 0 |
| 13 | ಹಾಸನ | 4 |
| 14 | ಕಲಬುರಗಿ | 0 |
| 15 | ಕೊಡಗು | 0 |
| 16 | ಕೊಪ್ಪಳ | 0 |
| 17 | ಮಂಡ್ಯ | 3 |
| 18 | ಮೈಸೂರು | 16 |
| 19 | ದಕ್ಷಿಣ ಕನ್ನಡ & ಉಡುಪಿ | 3 |
| 20 | ರಾಯಚೂರು | 0 |
| 21 | ಶಿವಮೊಗ್ಗ | 1 |
| 22 | ಉತ್ತರ ಕನ್ನಡ | 1 |
| 23 | ತುಮಕೂರು | 3 |
| 24 | ವಿಜಯಪುರ | 14 |
| | **ಒಟ್ಟು** | **147** |

ಹಾಪ್‌ಕಾಮ್ಸ್ ಕೇಂದ್ರಗಳು ಮುಚ್ಚಲು ಕಾರಣಗಳು ಈ ಕೆಳಕಂಡಂತಿವೆ:-

- ಜನಸಂದಣಿ ಇರದ ಪ್ರದೇಶಗಳಲ್ಲಿ ಹೆಚ್ಚು ವ್ಯಾಪಾರ

| | | |
|---|---|---|
| | | ವಹಿವಾಟು ನಡೆಯದೇ ಇರುವುದರಿಂದ ಹಾಗೂ ಖಾಸಗಿಯವರು ರಸ್ತೆ ಬದಿಗಳಲ್ಲಿ/ಅಂಗಡಿಗಳಲ್ಲಿ ಹಣ್ಣು-ತರಕಾರಿ ಮಾರಾಟ ಮಾಡುತ್ತಿರುವುದರಿಂದ ವ್ಯಾಪಾರ ವಹಿವಾಟು ಕಡಿಮೆಯಾಗಿ ಮಳಿಗೆಗಳನ್ನು ಮುಚ್ಚಲಾಗಿದೆ.<br>• ಬೆಂಗಳೂರಿನ ಪ್ರತಿಷ್ಠಿತ ಮಾಲ್ ಗಳು, ಖಾಸಗಿ ಆನ್ ಲೈನ್ ಮಾರುಕಟ್ಟೆಗಳಿಂದ ಪೈಪೋಟಿ ಉಂಟಾಗಿರುತ್ತದೆ.<br>• ಬೆಂಗಳೂರು/ಮೈಸೂರು ಹಾಗೂ ಇನ್ನಿತರೆ ಹಾಪ್ ಕಾಮ್ಸ್ ನೌಕರರು ಹೆಚ್ಚಿನ ಪ್ರಮಾಣದಲ್ಲಿ ನಿವೃತ್ತಿ ಹೊಂದಿರುತ್ತಾರೆ. ಇದರಿಂದಾಗಿ ನೌಕರರ ಕೊರತೆ ಉಂಟಾಗಿ ಮಳಿಗೆಗಳನ್ನು ಮುಚ್ಚಲಾಗಿರುತ್ತದೆ.<br>• ರಸ್ತೆಯ ಅಗಲೀಕರಣ /ಮೆಟ್ರೋ ಕಾಮಗಾರಿಯಿಂದಾಗಿ ಮಳಿಗೆಗಳನ್ನು ಕೆಡವಲಾಗಿರುತ್ತದೆ ಜೊತೆಗೆ ಇತರೆ ಜಿಲ್ಲೆಗಳಲ್ಲಿಯೂ ರಸ್ತೆಯ ಅಗಲೀಕರಣದಿಂದಾಗಿ ಮಳಿಗೆಗಳನ್ನು ಕೆಡವಲಾಗಿರುತ್ತದೆ.<br>ಸಿಬ್ಬಂದಿ ಕೊರತೆ, ಮೂಲ ಸೌಕರ್ಯದ ಕೊರತೆ, ಖಾಸಗಿ ಆನ್‌ಲೈನ್ ಮಾರುಕಟ್ಟೆಗಳ ಪೈಪೋಟಿಯೂ ಸೇರಿದಂತೆ ಹಾಪ್‌ಕಾಮ್ಸ್ ಮಳಿಗೆಗಳನ್ನು ಮುಚ್ಚಲು ಕಾರಣಗಳಾಗಿವೆ. |
| ಇ) | ಉಳಿದ ಹಾಪ್‌ಕಾಮ್ಸ್‌ಗಳಲ್ಲಿ ಎಷ್ಟು ಹಾಪ್‌ಕಾಮ್ಸ್‌ಗಳು ಲಾಭ ಮಾಡುತ್ತಿವೆ; ಎಷ್ಟು ಹಾಪ್‌ಕಾಮ್ಸ್ ಗಳು ನಷ್ಟದಲ್ಲಿವೆ; ನಷ್ಟಕ್ಕೆ ಕಾರಣಗಳೇನು; | ಉಳಿದ/ಕಾರ್ಯ ನಿರ್ವಹಿಸುತ್ತಿರುವ 24 ಹಾಪ್‌ಕಾಮ್ಸ್‌ಗಳಲ್ಲಿ 2024-25ನೇ ಸಾಲಿಗೆ 19 ಹಾಪ್‌ಕಾಮ್ಸ್‌ಗಳು ಲಾಭ ಮಾಡುತ್ತಿವೆ; 05 ಹಾಪ್‌ಕಾಮ್ಸ್‌ಗಳು ನಷ್ಟದಲ್ಲಿವೆ.<br>ಹಾಪ್‌ಕಾಮ್ಸ್ ನಷ್ಟಕ್ಕೆ ಕಾರಣಗಳನ್ನು ಹಿಂದಿನ ಉತ್ತರ (ಆ) ರಲ್ಲಿ ನೀಡಲಾಗಿದೆ. |
| ಈ) | ಹಾಪ್‌ಕಾಮ್ಸ್ ಗಳಲ್ಲಿ ಎಷ್ಟು ಹುದ್ದೆಗಳು ಮಂಜೂರಾಗಿವೆ; ಈ ಪೈಕಿ ಎಷ್ಟು ಹುದ್ದೆಗಳು ಖಾಲಿ ಇವೆ: | ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ 24 ಹಾಪ್‌ಕಾಮ್ಸ್ ಗಳಲ್ಲಿ ಒಟ್ಟು 782 ಹುದ್ದೆಗಳು ಮಂಜೂರಾಗಿವೆ; ಈ ಪೈಕಿ 344 ಹುದ್ದೆಗಳು ಖಾಲಿ ಇವೆ: |
| ಉ) | ಕಳೆದ 3 ವರ್ಷಗಳಲ್ಲಿ ಹಾಪ್‌ಕಾಮ್ಸ್ ಅನುಭವಿಸಿದ ನಷ್ಟ ಎಷ್ಟು; (ಜಿಲ್ಲಾವಾರು ವಿವರಗಳನ್ನು ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಹಾಪ್‌ಕಾಮ್ಸ್ ಅನುಭವಿಸಿದ ನಷ್ಟ ಒಟ್ಟು ರೂ.665.7 ಲಕ್ಷಗಳು ಇದ್ದು, ವಿವರಗಳು ಕೆಳಗಿನಂತಿವೆ:- |

| ಹಾಪ್ ಕಾಮ್ಸ್ | ನಷ್ಟ (ರೂ. ಲಕ್ಷಗಳಲ್ಲಿ) | | | ಒಟ್ಟು |
|---|---|---|---|---|
| | 2022-23 | 2023-24 | 2024-25 | |
| ಬೆಂಗಳೂರು | 415.07 | 72.30 | - | 487.37 |
| ಬಾಗಲಕೋಟೆ | 0.23 | - | - | 0.23 |
| ಬೀದರ್ | 10.13 | - | - | 10.13 |
| ಬಳ್ಳಾರಿ | 2.03 | 2.40 | 1.13 | 5.56 |
| ಚಾಮರಾಜನಗರ | 6.89 | 2.69 | 3.09 | 12.67 |
| ಚಿತ್ರದುರ್ಗ | 1.11 | - | - | 1.11 |

| | | | | |
|---|---|---|---|---|
| ಹಾವೇರಿ | 0.30 | 0.15 | - | 0.45 |
| ಹಾಸನ | 6.78 | - | 18.98 | 25.76 |
| ಮಂಡ್ಯ | 25.10 | - | - | 25.10 |
| ಮೈಸೂರು | 58.65 | 31.72 | - | 90.37 |
| ದ.ಕ.& ಉಡುಪಿ | - | - | 6.18 | 6.18 |
| ರಾಯಚೂರು | - | - | 0.77 | 0.77 |
| **ಒಟ್ಟು ನಷ್ಟ** | **526.29** | **109.26** | **30.15** | **665.7** |

ಊ) ಹಾಪ್‌ಕಾಮ್ಸ್ ಅನ್ನು ಲಾಭದ ಹಳಿಗೆ ತರಲು ಸರ್ಕಾರ ಕೈಗೊಂಡ ಕ್ರಮಗಳೇನು? (ವಿವರಗಳನ್ನು ನೀಡುವುದು)

**ಹಾಪ್‌ಕಾಮ್ಸ್ ಅನ್ನು ಲಾಭದ ಹಳಿಗೆ ತರಲು ಸರ್ಕಾರ ಕೈಗೊಂಡ ಕ್ರಮಗಳು ಕೆಳಕಂಡಂತಿವೆ:-**

1. ಬೆಂಗಳೂರು ಹಾಪ್‌ಕಾಮ್ಸ್ ಸಂಸ್ಥೆಯ ವಹಿವಾಟಿನ ಅಭಿವೃದ್ಧಿಗಾಗಿ 2024-25 ನೇ ಸಾಲಿನಲ್ಲಿ ರೂ.15 ಕೋಟಿಗಳ ದುಡಿಯುವ ಬಂಡವಾಳ ನೀಡಲಾಗಿರುತ್ತದೆ.

2. ಹಣ್ಣು ಮತ್ತು ತರಕಾರಿಗಳನ್ನು ಸರಬರಾಜು ಮಾಡಲು ಜಿಲ್ಲಾ ಹಾಪ್‌ಕಾಮ್ಸ್‌ಗಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಆಇ/885/ವೆಚ್ಚ-12/2025 ದಿನಾಂಕ:23.10.2025 ರನ್ವಯ 4ಜಿ ವಿನಾಯಿತಿ ದೊರಕಿದ್ದು, ರಾಜ್ಯದಲ್ಲಿನ ಸರ್ಕಾರಿ ಇಲಾಖೆ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ, ಕೇಂದ್ರ ಕಾರಾಗೃಹ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ವಸತಿ ನಿಲಯಗಳಿಗೆ, ವಸತಿ ಶಾಲೆಗಳಿಗೆ, ಆಶ್ರಮ ಶಾಲೆಗಳಿಗೆ, ಮೊರಾರ್ಜಿ ದೇಸಾಯಿ ವಸತಿ ನಿಲಯಗಳಿಗೆ, ಸರ್ಕಾರದ ಅಧೀನದಲ್ಲಿ ಬರುವ ವಿದ್ಯಾರ್ಥಿ ನಿಲಯಗಳಿಗೆ, ಆಸ್ಪತ್ರೆಗಳಿಗೆ ಇತ್ಯಾದಿ) ವಿವಿಧ ಜಿಲ್ಲಾ ಹಾಪ್‌ಕಾಮ್ಸ್‌ಗಳ ಮುಖೇನ ಹಣ್ಣು ಮತ್ತು ತರಕಾರಿಗಳನ್ನು ಪೂರೈಸುತ್ತಿದ್ದು, ಹಾಪ್‌ಕಾಮ್ಸ್‌ಗಳ ಲಾಭದಾಯಕತೆ ಮತ್ತು ಆರ್ಥಿಕ ಸುಧಾರಣೆಗೆ ಸಹಾಯಕವಾಗಿರುತ್ತದೆ.

3. ಹಾಪ್‌ಕಾಮ್ಸ್‌ಗಳಲ್ಲಿ ಮೂಲಭೂತ ಸೌಕರ್ಯಗಳ ನಿರ್ಮಾಣಕ್ಕಾಗಿ (ಹಣ್ಣು ಮತ್ತು ತರಕಾರಿಗಳ ಮಾರಾಟ ಮಳಿಗೆಗಳು/ಸಂಗ್ರಹಣಾ ಕೇಂದ್ರ/ಶೀಥಲಗೃಹ/ಹಣ್ಣು ಮಾಗಿಸುವ ಘಟಕ/ಪ್ಯಾಕ್ ಹೌಸ್ ಇತ್ಯಾದಿ), ಹಣ್ಣು ಮತ್ತು ತರಕಾರಿಗಳ ಸಾಗಣೆಗೆ ಮೊಬೈಲ್ ವ್ಯಾನುಗಳ ಖರೀದಿಗಾಗಿ, ಸ್ಪಾಟ್ ಬಿಲ್ಲಿಂಗ್ ಮಿಷನ್‌ಗಳ ಖರೀದಿ ಇತ್ಯಾದಿ ಘಟಕಗಳಿಗೆ ತೋಟಗಾರಿಕೆ ಇಲಾಖೆಯ ವಿವಿಧ ಯೋಜನೆಗಳಡಿ ರೂ.55.20 ಕೋಟಿ ಅನುದಾನವನ್ನು ಹಾಪ್‌ಕಾಮ್ಸ್‌ಗಳಿಗೆ ಒದಗಿಸಲಾಗಿರುತ್ತದೆ (2008-09 ರಿಂದ 2025-26ನೇ ಸಾಲಿನವರೆಗೆ).

ಸಂಖ್ಯೆ: HORTI 164 HGM 2026

**(ಎಸ್. ಎಸ್. ಮಲ್ಲಿಕಾರ್ಜುನ್)**

ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು